ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 561/2023

(ಫ್ರಾಸಾ-4 ಚಾಸಾ-4 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 12.05.2025

| | | |
|---|---|---|
| ಸಾಕ್ಷಿದಾರರ ಹೆಸರು | - | ಹರೀಶ್ |
| ತಂದೆಯ ಹೆಸರು | - | ಈರಣ್ಣ |
| ವಯಸ್ಸು | - | 38 ವರ್ಷ, |
| ಉದ್ಯೋಗ | - | ಕ್ಯಾಷಿಯರ್ |
| ವಾಸ | - | ಗಣಪತಿ ನಗರ, ಚಿಕ್ಕಬಾಣಾವರ |

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

ನಾನು ಚಿಕ್ಕಬಾಣಾವರದಲ್ಲಿರುವ ಚಿಗರಿ ವೈನ್ ಶಾಪ್ ನಲ್ಲಿ ಕಳೆದ 8 ವರ್ಷಗಳಿಂದ ಕ್ಯಾಷಿಯರ್ ಆಗಿ ಕೆಲಸ ಮಾಡುತ್ತಿದ್ದೇನೆ. ಸದರಿ ವೈನ್ ಶಾಪ್ ನಲ್ಲಿ ಜಯರಾಮ್ / ಚಾಸಾ-10 ಇವರು ಮ್ಯಾನೇಜರ್ ಆಗಿ ಕಳೆದ 10 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಈಗ ನಾನು ಒಂದು ದಾಖಲೆ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ದಾಖಲೆ ನೊಟೀಸ್ ಇದ್ದು ಅದನ್ನು ನಿಶಾನೆ ಪಿ-5 ಎಂದು ಹಾಗೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಶಾನೆ ಪಿ-5(ಎ) ಎಂದು ಗುರುತಿಸಲಾಯಿತು. ಈಗ ನಾನು ಇನ್ನೊಂದು ದಾಖಲೆ ನೋಡುತ್ತಿದ್ದು ಸದರಿ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಸದರಿ ದಾಖಲೆ ಪಂಚನಾಮೆ ಇದ್ದು ಅದನ್ನು ನಿಶಾನೆ ಪಿ-6 ಎಂದು ಹಾಗೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಶಾನೆ ಪಿ-6(ಎ) ಎಂದು ಗುರುತಿಸಲಾಯಿತು.

2. ಹಿಮಾಲಯ ಡಾಬಾದ ಮುಂದೆ ಕೊಲೆಯಾದ ಹಿನ್ನೆಲೆಯಲ್ಲಿ ದಿಃ14.01.2023 ರಂದು ಪೋಲಿಸರು ಸದರಿ ಸ್ಥಳದಲ್ಲಿ ನಿಪಿ-6 ರಂತೆ ಬೆಳಗ್ಗೆ 11.00 ಘಂಟೆ ಸಮಯದಲ್ಲಿ ಪಂಚನಾಮೆ ಮಾಡಿದ್ದು ನಾನು ಸದರಿ ಪಂಚನಾಮೆಗೆ ಸ್ಥಳದಲ್ಲಿದ್ದು ಸಹಿ ಮಾಡಿರುತ್ತೇನೆ. ಸ್ಥಳದಲ್ಲಿ ರಕ್ತಸಿಕ್ತವಾದ ಮಣ್ಣು, ಒಂದು ಜೊತೆ ರಕ್ತವಾಗಿರುವ

ಚಪ್ಪಲಿಗಳು ಅನ್ನು ಪೋಲಿಸರು ತೆಗೆದುಕೊಂಡರು.

3. ಭರತ್ ಎನ್ನುವವರು ಕೊಲೆ ಮಾಡಿರುವ ವಿಚಾರ ನನಗೆ ತಿಳಿದುಬಂತು. ಸ್ಥಳ ಪಂಚನಾಮೆ ಕಾಲಕ್ಕೆ ಚಾಸಾ-2 ಮತ್ತು ಚಾಸಾ-10 ಹಾಜರಿದ್ದರು. ಸದರಿ ಹಿಮಾಲಯ ಡಾಬಾದಲ್ಲಿ ಚಾಸಾ-2 ಗಣೇಶ್ ಅಡುಗೆ ಭಟ್ಟರಾಗಿದ್ದು ಚಾಸಾ-3 ಲೋಹಿತ್ ಇವರು ಸದರಿ ಡಾಬಾದ ಮಾಲೀಕರು. ಪೋಲಿಸರು ಪಂಚನಾಮೆ ಮಾಡಿದ ಸ್ಥಳ ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಐದು ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-7 ರಿಂದ 11 ಎಂದು ಗುರುತಿಸಲಾಯಿತು. ಪೋಲಿಸರು ತೆಗೆದುಕೊಂಡು ಹೋದ ಚಪ್ಪಲಿಯನ್ನು ನೋಡಿದರೆ ಗುರುತಿಸಬಲ್ಲೆ.

(ಈ ಹಂತದಲ್ಲಿ ವಿಶೇಷ ಸರ್ಕಾರಿ ಅಭಿಯೋಜಕರು ನ್ಯಾಯಾಲಯದ ಮುಂದಿರುವ ಸೀಲ್ ಮಾಡಿದ ವಸ್ತುಗಳನ್ನು ತೆರೆಯಲು ಅನುಮತಿ ಕೋರಿದ್ದು ಅವುಗಳು ಸೀಲ್ ಆಗಿದ್ದು ತೆರೆಯಲು ಅನುಮತಿ ನೀಡಲಾಯಿತು)

ಈಗ ನಾನು ನ್ಯಾಯಾಲಯದ ಮುಂದೆ ಇರುವ ಒಂದು ಜೊತೆ ಚಪ್ಪಲಿಯನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ-6 ಎಂದು ಗುರ್ತಿಸಲಾಯಿತು.

4. ದಿಃ13.01.2023 ರಂದು ರಾತ್ರಿ 10.25 ಘಂಟೆ ಸಮಯದಲ್ಲಿ ಕೊಲೆಯಾದ ವ್ಯಕ್ತಿ ಮತ್ತು ಆರೋಪಿ ಭರತ್ ಇವರು ನಮ್ಮ ವೈನ್ ಶಾಪ್ ಗೆ ಬಂದು ಮದ್ಯವನ್ನು ಪಾರ್ಸಲ್ ತೆಗೆದುಕೊಂಡು ಹೋಗಿರುತ್ತಾರೆ. ನಂತರ ನಾನು ಆ ದಿನ ರಾತ್ರಿ 10.30 ಕ್ಕೆ ವೈನ್ ಶಾಪ್ ಅನ್ನು ಮುಚ್ಚಿಕೊಂಡು ಹೋಗಿರುತ್ತೇನೆ.

5. ಮರುದಿನ ಭರತ್ ಜೊತೆ ಬಂದ ವ್ಯಕ್ತಿಯನ್ನು ಭರತ್ ಕೊಲೆ ಮಾಡಿದ ಬಗ್ಗೆ ನನಗೆ ತಿಳಿದುಬಂತು. ನ್ಯಾಯಾಲಯದ ವಿಸಿಯಲ್ಲಿ ಹಾಜರುಪಡಿಸಿದ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ಭರತ್ ಕೊಲೆಯಾದ ವ್ಯಕ್ತಿಯೊಂದಿಗೆ ನಮ್ಮ ವೈನ್ ಶಾಪ್ ಗೆ ಬಂದು ಮದ್ಯ ತೆಗೆದುಕೊಂಡು ಹೋಗಿದ್ದರು ಎಂದು ಹೇಳುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ ಆರ್**

**(ಕಾನೂನು ಅಭಿರಕ್ಷಕರು) ವಕೀಲರಿಂದಃ**

6. ನಾನು ಪಂಚನಾಮೆ ಮಾಡುವ ಕಾಲಕ್ಕೆ ಒಂದು ಬಾರಿ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಹಾಗೂ ಇನ್ನೊಂದು ಬಾರಿ ದಿಃ21.01.2023ರಂದು ಡಿಸಿಪಿ ಕಛೇರಿಯಲ್ಲಿ ಇನ್ನೊಂದು ಬಾರಿ ಹೇಳಿಕೆ ನೀಡಿರುತ್ತೇನೆ. ಅದನ್ನು ಹೊರತುಪಡಿಸಿ ಬೇರೆ ಹೇಳಿಕೆ ನೀಡಿರುವುದಿಲ್ಲ. ನಾನು ಪೋಲಿಸರ ಮುಂದೆ ನೀಡಿದ ಹೇಳಿಕೆಯಲ್ಲಿ 'ಭರತ್ ಬಂದಿದ್ದರು' ಎಂದು ಹೆಸರನ್ನು ಹೇಳಿರುವುದಿಲ್ಲ. ಸಾಕ್ಷಿ ಮುಂದುವರಿದು ಆ ಸಮಯದಲ್ಲಿ ನನಗೆ ಅವರ ಹೆಸರು ತಿಳಿದಿರಲಿಲ್ಲ ಎಂದು ಹೇಳುತ್ತಾರೆ. ನಮ್ಮ ವೈನ್ ಶಾಪ್ ಗೆ ಸುಮಾರು ಜನ ಮದ್ಯವನ್ನು ಖರೀದಿಸಲು ಬಂದು ಹೋಗುತ್ತಿರುತ್ತಾರೆ. ಕೊಲೆಯಾದ ವ್ಯಕ್ತಿ ಮತ್ತು ಆರೋಪಿ ಭರತ್ ಇವರು ನಮ್ಮ ವೈನ್ ಶಾಪ್ ಗೆ ಬಂದು ಮದ್ಯವನ್ನು ಪಾರ್ಸಲ್ ತೆಗೆದುಕೊಂಡು ಹೋಗಿರುತ್ತಾರೆ ಎಂದು ನಾನು ಇದೇ ಮೊದಲ ಬಾರಿ ನ್ಯಾಯಾಲಯದಲ್ಲಿ ಹೇಳಿದ್ದು ಈ ಹಿಂದೆ ಹೇಳಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಇಬ್ಬರು ಆಸಾಮಿಗಳು ಎಂದು ಹೇಳಿದ್ದೆ ಎಂದು ಹೇಳಿದ್ದು ಹೆಸರು ಹೇಳಿರುವುದಿಲ್ಲ ಎಂದು ಹೇಳುತ್ತಾರೆ.

7. ಪಂಚನಾಮೆ ಸಮಯದಲ್ಲಿ ನಾನು ಎಷ್ಟು ಪುಟಗಳಿಗೆ ಸಹಿ ಹಾಕಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ಪಂಚನಾಮೆ ಮಾಡಿದ ಸ್ಥಳವು ಜನನಿಬಿಡ ಪ್ರದೇಶವಾಗಿದ್ದು ಸಾಕಷ್ಟು ವಾಹನ ಸಂಚಾರ ಇರುತ್ತದೆ. ಪಂಚನಾಮೆ ಮಾಡುವ ಸಮಯದಲ್ಲಿ ನೀಡಿದ ಹೇಳಿಕೆಯಲ್ಲಿ, ಭರತ್ ಎನ್ನುವವರು ಕೊಲೆ ಮಾಡಿದ್ದು ತಿಳಿದುಬಂತು ಎಂದು ಹೇಳಿರುವುದಿಲ್ಲ ಎಂದರೆ ಸರಿ. ಪಂಚನಾಮೆ ಸಮಯದಲ್ಲಿ ಒಟ್ಟು ಎಷ್ಟು ವಸ್ತುಗಳನ್ನು ತೆಗೆದುಕೊಂಡರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಒಂದು ಜೊತೆ ಸ್ಲಿಪ್ಪರ್ ಹಾಗೂ ಸ್ಥಳದಲ್ಲಿದ್ದ ಮಣ್ಣನ್ನು ತೆಗೆದುಕೊಂಡರು ಎಂದು ಹೇಳುತ್ತಾರೆ. ಪಂಚನಾಮೆಯು ಬರವಣಿಗೆಯಲ್ಲಿದೆ ಎಂದರೆ ಸರಿ. ಪಂಚನಾಮೆ ಮಾಡಿದ ಸ್ಥಳದ ಚೆಕ್ಕಬಂದಿ ನನಗೆ ಹೇಳಲು ಬರುವುದಿಲ್ಲ. ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

ಪೋಲಿಸರು ಸಹಿ ಮಾಡು ಎಂದು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ. ಪೋಲಿಸರು ಸ್ಥಳದಲ್ಲಿ ಪಂಚನಾಮೆ ಮಾಡಿರುವುದಿಲ್ಲ ಹಾಗೂ ನಿಪಿ-7 ರಿಂದ 11 ಪೋಟೋಗಳು ಕೃತ್ಯ ನಡೆದ ಸ್ಥಳದ ಪೋಟೋಗಳು ಅಲ್ಲ ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಪಂಚನಾಮೆಯನ್ನು ಸ್ಥಳದಲ್ಲಿ ಮಾಡಿರದೇ ನಿಪಿ-6 ಪಂಚನಾಮೆಗೆ ಪೋಲಿಸ್ ಠಾಣೆಯಲ್ಲಿ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆ ನೀಡದೇ ಇದ್ದರೂ ಹಾಗೂ ಪಂಚನಾಮೆಗೆ ಸಹಿಯನ್ನು ಠಾಣೆಯಲ್ಲಿ ಹಾಕಿದ್ದರೂ ಸಹ ಪೋಲಿಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ವಿಸಿಯಲ್ಲಿ ಕಾಣುತ್ತಿರುವ ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆ ದಿನ ವೈನ್ ಶಾಪ್ ಗೆ ಇನ್ನೊಬ್ಬ ದಪ್ಪಗಿನ ವ್ಯಕ್ತಿಯೊಂದಿಗೆ ಆರೋಪಿ ಬಂದಿದ್ದರು ಎಂದು ಹೇಳುತ್ತಾರೆ.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು